# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 615

ಉತ್ತರಿಸಬೇಕಾದ ದಿನಾಂಕ : 11.12.2025

ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| **ಅ)** | ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲಿ ಹಲವಾರು ವಿದೇಶಿಗರು ಅವರ ವೀಸಾ ಅವಧಿ ಮುಗಿದ ಬಳಿಕವೂ ಅಕ್ರಮವಾಗಿ ವಾಸಿಸುತ್ತಿದ್ದು, ಅವರಲ್ಲಿ ಬಹುತೇಕರು ಕಾನೂನು ಸುವ್ಯವಸ್ಥೆಗೆ ಭಂಗ ತರುವುದರ ಜೊತೆಗೆ ಡ್ರಗ್ಸ್ ಪೆಡ್ಲರ್ಸ್ ಆಗಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ನಿರಂತರವಾಗಿ ಭಾಗಿಯಾಗುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ |
| **ಆ)** | ಬಂದಿದ್ದಲ್ಲಿ 2025ನೇ ವರ್ಷದಲ್ಲಿ ವೀಸಾ ಅವಧಿ ಮುಗಿದ ಬಳಿಕವೂ ಅಕ್ರಮವಾಗಿ ವಾಸಿಸುತ್ತಿದ್ದ ಎಷ್ಟು ಜನ ವಿದೇಶಿಯರನ್ನು ಇದುವರೆಗೆ ಅವರವರ ದೇಶಗಳಿಗೆ ಗಡಿಪಾರು ಮಾಡಲಾಗಿದೆ: | ಬೆಂಗಳೂರು ನಗರದಲ್ಲಿ ದಿನಾಂಕ: 01.01.2025 ರಿಂದ 30.09.2025ರ ವರೆಗೆ ವೀಸಾ ಅವಧಿ ಮುಗಿದ ನಂತರವೂ ಅಕ್ರಮವಾಗಿ ನೆಲೆಸಿರುವ 202 ಜನ ವಿದೇಶಿಯರನ್ನು ಗಡಿಪಾರು ಮಾಡಲಾಗಿದೆ. |
| **ಇ)** | 2025ನೇ ವರ್ಷದಲ್ಲಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿರುವ ಎಷ್ಟು ಜನ ವಿದೇಶಿ ಡ್ರಗ್ಸ್ ಪೆಡ್ಲರ್ಸ್‌ಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ: (ವಿವರ ನೀಡುವುದು) | ಬೆಂಗಳೂರು ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ಒಟ್ಟು 37 ಜನ ವಿದೇಶಿ ಡ್ರಗ್ಸ್ ಪೆಡ್ಲರ್ಸ್ ಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ. ವಿವರವನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | ಅಕ್ರಮವಾಗಿ ನೆಲೆಸಿರುವುದರ ಜೊತೆಗೆ ಡ್ರಗ್ಸ್ ಮಾರಾಟ ದಂಧೆಯಲ್ಲಿ ನಿರಂತರವಾಗಿ ಭಾಗಿಯಾಗುತ್ತಿರುವ ಈ ವಿದೇಶಿ ಡ್ರಗ್ಸ್ ಪೆಡ್ಲರ್ಸ್‌ಗಳ ವಿರುದ್ಧ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು: | ಬೆಂಗಳೂರು ನಗರದಲ್ಲಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ವಿದೇಶಿಯರು ಭಾಗಿಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ, ವಿದೇಶಿಯರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕ್ರಮ ಜರುಗಿಸಲಾಗಿದೆ. ಡ್ರಗ್ಸ್ ದಂಧೆಯನ್ನು ತಡೆಯಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:-<br><br>➢ ಪದೇ ಪದೇ ಡ್ರಗ್ಸ್ ಅಕ್ರಮಗಳಲ್ಲಿ ಭಾಗಿಯಾಗಿದ್ದ 06 ಜನ ವಿದೇಶಿಯರನ್ನು PIT NDPS ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.<br>➢ ಅಕ್ರಮವಾಗಿ ನೆಲಸಿರುವ ವಿದೇಶಿಗರನ್ನು ಪತ್ತೆ ಮಾಡಿ ಎಫ್.ಆರ್.ಓ ರವರ ಮೂಲಕ ಅವರ ದೇಶಗಳಿಗೆ ವಾಪಸ್ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಡ್ರಗ್ಸ್ ಮಾರಾಟ ಮಾಡುವ ವಿದೇಶಿಯರ ಮಾಹಿತಿಯನ್ನು ಸಾರ್ವಜನಿಕರು ಟೋಲ್ ಫ್ರೀ ಸಂಖ್ಯೆ. 1908 ದೂರವಾಣಿಯ ಮುಖಾಂತರ ಸಂಪರ್ಕಿಸಿ ಮಾಹಿತಿ ನೀಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ.<br>➢ ವಿದೇಶಿಯರು ವಾಸಿಸುತ್ತಿರುವ ಪ್ರದೇಶದಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>➢ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದೇಶಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಉಪನ್ಯಾಸದ ಮೂಲಕ ವಿವರವಾಗಿ ತಿಳುವಳಿಕೆ ನೀಡಲಾಗುತ್ತಿದೆ.<br><br>➢ ಶಾಲಾ ಕಾಲೇಜುಗಳ ಹತ್ತಿರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಹಾಗೂ ಅಲ್ಲಿಯೇ ಸಾರ್ವಜನಿಕವಾಗಿ ಮಾದಕ ವಸ್ತು ಸೇವನೆ ಮಾಡುವ ವಿದೇಶಿಯರ ವಿರುದ್ಧ ದಂಡವನ್ನು ವಿಧಿಸುವುದರ ಮೂಲಕ ಸಾರ್ವಜನಿಕ ಸ್ಥಳಗಳಲ್ಲಿ ಸೇವನೆ ಮಾಡುವುದನ್ನು ತಡೆಗಟ್ಟುವುದು ಮತ್ತು ಜಾಗೃತಿ ಮೂಡಿಸುವುದರ ಬಗ್ಗೆ ಹೆಚ್ಚಿನ ಗಮನ |

| | | |
|---|---|---|
| | | ಹರಿಸಲು ಸೂಚಿಸಲಾಗಿದೆ.<br>➢ ನಗರದಲ್ಲಿ ಡ್ರಗ್ಸ್ ಅಕ್ರಮಗಳನ್ನು ಪರಿಣಾಮ ಕಾರಿಯಾಗಿ ನಿಯಂತ್ರಿಸುವ ಸಲುವಾಗಿ NCB, DRI, Customs, Railway, Education ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯನ್ನು ನಡೆಸಲಾಗಿದೆ.<br>➢ ಮಾದಕ ವಸ್ತುಗಳ ಮಾರಾಟ/ ಸೇವನೆಯ ಪ್ರಕರಣಗಳಲ್ಲಿ ವಿದೇಶಿ ಆರೋಪಿಗಳಿಗೆ ವಿಶೇಷವಾಗಿ ನೈಜೀರಿಯನ್ಸ್ ಪ್ರಜೆಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳ ಸರಬರಾಜಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದ್ದು, ಇಂತಹ ಕೃತ್ಯಗಳಲ್ಲಿ ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿಯರು ವಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಒದಗಿಸುವಂತೆ ಈಗಾಗಲೇ ಸೂತ್ತೋಲೆಗಳನ್ನು ಹೊರಡಿಸಲಾಗಿದೆ. ವಿಶೇಷ ಕಾರ್ಯಚರಣೆಗಳನ್ನು ನಡೆಸಿ ಇಂತಹ ಕೃತ್ಯ ವೆಸಗುವಂತಹವರ ವಿರುದ್ಧ ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ವಿದೇಶಿಯರಿಂದ ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಸಲುವಾಗಿ, ಠಾಣಾ ಮಟ್ಟದಲ್ಲಿ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಮಾದಕ ದ್ರವ್ಯ (ಡ್ರಗ್ಸ್) ಹಾವಳಿಯನ್ನು ತಡೆಗಟ್ಟಲು ಸೂಕ್ತ ನಿಗಾವಹಿಸಿ ಮಾದಕ ದ್ರವ್ಯಗಳ ಮಾರಾಟ ಮತ್ತು ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಈ ಬಗ್ಗೆ ಬಾತ್ಮೀದಾರರಿಗೂ ಸಹ ಮಾಹಿತಿಯನ್ನು ನೀಡುವಂತೆ ಸೂಚಿಸಲಾಗಿದೆ. ಅಧಿಕಾರಿ ಸಿಬ್ಬಂದಿಗಳಿಗೆ ಮಾದಕ ದ್ರವ್ಯ (ಡ್ರಗ್ಸ್) ಗಳ ಮಾರಾಟ ಮತ್ತು ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸಲು ಸೂಕ್ತ ತಿಳುವಳಿಕೆ ನೀಡಿ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿರುತ್ತದೆ.<br>➢ ಬಾರ್ ಮತ್ತು ರೆಸ್ಟೋರೆಂಟ್, ಕೆಫೆ, ಪಬ್, ಡಾನ್ಸ್ ಬಾರ್ ಮುಂತಾದ ವಿದೇಶಿಯರು ಹೆಚ್ಚಾಗಿ ಸೇರುವ ಸ್ಥಳಗಳು, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಮಾದಕದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ |

| | | |
|---|---|---|
| | | ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕ್ರಮ ಜರುಗಿಸಲಾಗುತ್ತಿದೆ, ಸಾರ್ವಜನಿಕರ ಗಮನ ಸೆಳೆಯಲು ಬ್ಯಾನರ್, ಪೋಸ್ಟರ್‌ಗಳನ್ನು ಜನಸಂದಣಿ ಇರುವ ಸ್ಥಳಗಳಲ್ಲಿ ಪ್ರದರ್ಶಿಸಿ ಕರಪತ್ರ ಹಂಚಲಾಗುತ್ತಿದೆ ಮತ್ತು ಸಾಕ್ಷ್ಯ/ಕಿರುಚಿತ್ರಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.<br>➢ ಠಾಣಾ ಸರಹದ್ದುಗಳಲ್ಲಿ ಹೊಯ್ಸಳ, ಚೀತಾ, ಅಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತಿನಲ್ಲಿರುವ ಸಮಯದಲ್ಲಿ ಶಾಲಾ, ಕಾಲೇಜುಗಳ ಬಳಿ ಸೂಕ್ಷ್ಮವಾಗಿ ಗಮನಿಸಿ ವಿದೇಶಿ ವ್ಯಕ್ತಿಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಲಾಗಿದೆ. ಮಾದಕ ದ್ರವ್ಯ ಪದಾರ್ಥಗಳ ವಹಿವಾಟನ್ನು ತಡೆಗಟ್ಟಲು; ಪತ್ತೆಮಾಡಲು ಹಾಗೂ ಹದಿಯರೆಯದ ಯುವಕ ಮತ್ತು ಯುವತಿಯರನ್ನು ಇಂತಹ ದುಶ್ಚಟಗಳಿಂದ ತಡೆಗಟ್ಟುವ ಸಲುವಾಗಿ ಎಲ್ಲಾ ರೀತಿಯ ಸಾಧ್ಯವಿರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.<br>➢ ವಿದೇಶಿಯರು ನೆಲೆಸಿರುವ ಪ್ರದೇಶಗಳ ಬಳಿ ಸೂಕ್ಷ್ಮ ನಿಗಾವಣೆಯನ್ನು ಮಾಡುವುದರೊಂದಿಗೆ ಅವರ ಚಟುವಟಿಕೆಗಳ ಮೇಲೆ ನಿಗಾವಣೆ ಮಾಡಲಾಗುತ್ತಿದೆ.<br>➢ ವಿದೇಶಗಳಿಂದ ಬರುವ ಪಾರ್ಸೆಲ್‌ಗಳ ಬಗ್ಗೆ ನಿಗಾವಹಿಸುತ್ತಿದ್ದು ಅದರಲ್ಲಿ ಮಾದಕ ವಸ್ತುಗಳು ಸರಬರಾಜಾಗುತ್ತಿರುವುದು ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |
| ಉ) | ವಿದೇಶಿ ಡ್ರಗ್ಸ್ ಪೆಡ್ಲರ್ಸ್‌ಗಳ ವಿರುದ್ಧ ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಂಡು ವ್ಯಾಪಕವಾಗಿ ಹರಡಿರುವ ಡ್ರಗ್ಸ್ ಜಾಲಕ್ಕೆ ಶಾಶ್ವತವಾಗಿ ಕಡಿವಾಣ ಹಾಕಲು ಸರ್ಕಾರ ಈ ಕೂಡಲೇ ಅಗತ್ಯ ಹಾಗೂ ಸೂಕ್ತ ಕ್ರಮ ವಹಿಸುವುದೇ? | ಬೆಂಗಳೂರು ನಗರದಾದ್ಯಂತ ಡಗ್ಸ್ ದಂಧೆಯಲ್ಲಿ ತೊಡಗಿರುವ ವಿದೇಶಿಯರ ವಿರುದ್ಧ ಪ್ರಕರಣ ದಾಖಲಿಸಿ, ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಹೆಚ್‌ಡಿ 424 ಪಿಎಂಎಸ್ 2025**

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು

ಅನುಬಂಧ

| ಕ್ರ.ಸಂ | ಪೊಲೀಸ್ ಠಾಣೆ | ಮೊ.ಸಂ & ಕಲಂ | ದಸ್ತಗಿರಿ ಮಾಡಿದ ವಿದೇಶಿ ಪೆಡ್ಲರ್ ಗಳ ಸಂಖ್ಯೆ | ಪ್ರಕರಣದ ಪ್ರಸ್ತುತ ಹಂತ | ಷರಾ |
|---|---|---|---|---|---|
| 1. | Chikkajala | 001/2025 U/s 8(c),22(C) of NDPS Act & 14© of NDPS Act | 1 | Pending Trial | |
| 2. | Soladevanahalli | 015/2025 U/s 8(c),22(C) of NDPS Act | 1 | Pending Trial | |
| 3. | Amruthahally | 030/2025 U/s 8(c),22 of NDPS Act | 1 | Pending Trial | |
| 4. | Hennuru | 061/2025 U/s 20(b), 8(c),22(C) of NDPS Act | 1 | Pending Trial | |
| 5. | Adugodi | 054/2025 U/s 8(c), 21(c), 22(C) of NDPS Act | 2 | Pending Trial | |
| 6. | K.R Puram | 0160/2025 U/s 8(c),22© of NDPS Act & 14 of Foreigners Act | 2 | Pending Trial | |
| 7. | Bharathinagara | 027/2025 U/s 22(b), 22© of NDPS Act & 14 of Foreigners Act | 1 | Pending Trial | |
| 8. | Indiranagara | 063/2025 U/s 22(C) of NDPS Act & 14 of Foreigners Act | 1 | Pending Trial | |
| 9. | Beguru | 0079/2025 U/s 8(c),22 (a),22(b),22© of NDPS Act | 1 | Pending Trial | |
| 10. | Kothanur | 0109/2025 U/s 14 of Foreignersn Act & 22(C),8© of NDPS Act | 1 | Pending Trial | |
| 11. | CCB, Bengaluru City | 0039/2025 U/s 8(c),22 (a),22(b),22© of NDPS Act | 1 | Under Investigation | |

| | | | | | |
|---|---|---|---|---|---|
| 12. | Amruthahally | 0128/2025 U/s 8(c), 22 of NDPS Act | 1 | Pending Trial | |
| 13. | Hennuru | 231/2025 U/s 20(b),8(c) of NDPS Act & 14 of Foreigners Act | 1 | Pending Trial | |
| 14. | Chikkajala | 84/2025 U/s 8(c),22© of NDPS Act & 14 of Foreigners Act | 1 | Under Investigation | |
| 15. | Avalahally | 187/2025 U/s 8(c),22 (a),22(b),22© of NDPS Act | 1 | Under Investigation | |
| 16. | Yelahanka New Town PS | 0320/2025 U/s 8(c), 22(C), 21) of NDPS Act | 2 | Under Investigation | |
| 17. | Kengeri | 0364/2025 U/s 8(c),22 (a),22(b),22(C) of NDPS Act | 3 | Under Investigation | |
| 18. | Avalahally | 0291/2025 U/s 8(c), 22(b),22(C),22 (a) of NDPS Act | 1 | Under Investigation | |
| 19. | Electronic City | 0302/2025 U/s 8(c),22 of NDPS Act | 3 | Under Investigation | |
| 20. | Avalahally | 317/2025 U/s 20(b),8© of NDPS Act | 1 | Under Investigation | |
| 21. | Bagaluru | 0198/2025 U/s 20(b),22©, 8C of NDPS Act | 1 | Under Investigation | |
| 22. | Govindapura | 261/2025 U/s 8C,21(b) of NDPS Act | 1 | Under Investigation | |
| 23. | Hebbagodi | 447/2025 U/s 8(c),21A,21(c),22 (a),22(b),22© of NDPS Act | 1 | Under Investigation | |
| 24. | CCB, Bengaluru City | 80/2025 U/s 8(c),22 (a),22(b),22(C) of NDPS | 2 | Under Investigation | |

| | | | | | |
|---|---|---|---|---|---|
| | | Act & 14 of Foreigners Act | | | |
| 25. | White Field | 667/2025 U/s 8(c), 22(b) of NDPS Act | 1 | Under Investigation | |
| 26. | Kothanuru | 0301/2025 8(c),22(C) of NDPS Act & 14 Foreigners Act | 2 | Under Investigation | |
| 27. | Electronic City | 0372/2025 8(c),22 of NDPS Act | 2 | Under Investigation | |
| 28. | Hebbagodi | 0534/2025 8(c),22(C) of NDPS Act | 2 | Under Investigation | |
| 29. | Bandepalya | 156/2025 U/s 8(c), 21,22 of NDPS Act | 1 | Under Investigation | |
| 30. | Kodigehalli | 399/2025 U/s 22(b) of NDPS Act & 329(4) BNS | 1 | Under Investigation | |
| 31. | Kadugodi | Cr.No:0563/2025 U/s 8(c),22(C) of NDPS Act & 14 of Foreigners Act | 1 | Under Investigation | |
| 32. | Avalahally | Cr.No:0478/2025 U/s 8(c),22(b),22(C),22 (a) NDPS Act | 1 | Under Investigation | |
| 33. | Govindapura | Cr.No:0341/2025 U/s 20(b) of NDPS Act | 1 | Under Investigation | |
| 34. | CCB Bengaluru City Police | Cr.No:0088/2025 U/s 8(c),22(b),22(C),22(A)NDPS ACT & 14 of Foreigners Act | 1 | Under Investigation | |

| | | | | | |
|---|---|---|---|---|---|
| 35. | CCB Bengaluru City Police | Cr.No:0090/2025 U/s 8(c),22(A),22(b),22(C) NDPS Act & 14 of Foreigners Act | 1 | Under Investigation | |
| 36. | J.C. Nagar PS | Cr.No:0213/2025 U/s 22(C) of NDPS Act & 14 of Foreigners Act | 1 | Under Investigation | |
| 37. | CCB Bengaluru City Police | Cr.No:0093/2025 U/s 8(c),22(b), 22(C),22(A) NDPS ACT | 1 | Under Investigation | |